**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 402 /2019 ಸಿ.ಡಬ್ಲೂ.18 ಪಿ.ಡಬ್ಲೂ.13

| | |
|---|---|
| ಹೆಸರು | ಉದ್ದಂಡಪ್ಪ |
| ತಂದೆ/ಗಂಡ | ಜ್ಯೋತಿಬಾ |
| ವಯಸ್ಸು | 58 ವರ್ಷ |
| ಉದ್ಯೋಗ | ಪಿ ಐ ಲೋಕಾಯುಕ್ತ ಬೀದರ |
| ವಾಸಸ್ಥಳ | ಬೀದರ |

ದಿನಾಂಕ 07-03-2026
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಾನು ದಿಃ 25-10-2016 ರಿಂದ ದಿಃ 02.01.2017 ರವರೆಗೆ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಇದ್ದಾಗ ಆಳಂದ ಠಾಣೆಯ ಪ್ರಭಾರ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25-10-2016 ರಂದು ಚಾಸ-17ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ತನಿಖೆ ಕೈಗೊಂಡು ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ಕೊಟ್ಟು ಚಾಸ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರನ್ನು ಪಂಚರಾಗಲೂ ಕೇಳಿಕೊಂಡು ಅವರ ಸಮಕ್ಷಮ 10.30 ರಿಂದ 03.00 ಗಂಟೆಯವರೆಗೆ ಪಂಚನಾಮೆ ಮಾಡಿ ಅದೇ ದಿನ ಚಾಸ-4 ರಿಂದ 16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 27.11.2016 ರಂದು ಆರೋಪಿತರು ನ್ಯಾಯಾಲಯದ ಜಾಮೀನು ಪಡೆದುಕೊಂಡು ಬಂದು ಹಾಜರಾದ ಮೇರೆಗೆ ಅವರನ್ನು ಬಿಡುಗಡೆ ಮಾಡಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸ-19 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-5ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು 5(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ 1ನೇ ಆರೋಪಿಯನ್ನು ನೋಡಿ ಗುರುತಿಸಿದ್ದು 2ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ **ಶ್ರೀ. ಎಸ್ ಡಿ ಬಿ** ವಕೀಲರಿಂದ:</u>

ಗುನ್ನ ಸ್ಥಳಕ್ಕೆ ಹೋದಾಗ ನಾನು ಫಲಾನುಭವಿಗಳ ಅಧಾರ ಕಾರ್ಡ ಮತ್ತು ಆಸ್ತಿ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಘಟನಾ ಸ್ಥಳಕ್ಕೆ ನಾನು ಮತ್ತು ನನ್ನ ಠಾಣಾ ಬರಹಗಾರರು ಹೋಗಿದ್ದೇವು ಪಂಚರನ್ನು ನಮ್ಮ ಠಾಣಾ ಬರಹಗಾರರಾದ ಪ್ರಶಾಂತರವರು ಕರೆಸಿದ್ದರು. ನಾನು ಪ್ರಶಾಂತರವರ ಹೇಳಿಕೆಯನ್ನು ಪಡೆದುಕೊಂಡಿರವುದಿಲ್ಲ. ಮುಂದಿನ ತನಿಖಾಧಿಕಾರಿಯವರು ಅವರ ಹೆಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಹೇಳಿಕೆಗಳನ್ನು ಠಾಣೆಯಲ್ಲಿ ಬಂದು ಟೈಪ್ ಮಾಡಿಸಿರುತ್ತೇವೆ. ಪಂಚನಾಮೆ ಮಾಡಿ ಮರಳಿ ಠಾಣೆಗೆ 04.30 ರಿಂದ 05.00 ಗಂಟೆಗೆ ಬಂದಿದ್ದೇವು. ದಿಃ 25-10-2016 ರಂದು ಚಾಸ-17ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ತನಿಖೆ ಕೈಗೊಂಡು ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ಕೊಟ್ಟು ಚಾಸ-2 ಮತ್ತು 3 ರವರನ್ನು ಬರಮಾಡಿಕೊಂಡು

ಅವರನ್ನು ಪಂಚರಾಗಲೂ ಕೇಳಿಕೊಂಡು ಅವರ ಸಮಕ್ಷಮ 10.30 ರಿಂದ 03.00 ಗಂಟೆಯವರೆಗೆ ಪಂಚನಾಮೆ ಮಾಡಿ ಅದೇ ದಿನ ಚಾಸ-4 ರಿಂದ 16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 27.11.2016 ರಂದು ಆರೋಪಿತರು ನ್ಯಾಯಾಲಯದ ಜಾಮೀನು ಪಡೆದುಕೊಂಡು ಬಂದು ಹಾಜರಾದ ಮೇರೆಗೆ ಅವರನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಚಾಸ-19 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ